ದಿನಾಂಕ 20.07.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಎ.ಎಸ್., ವಕೀಲರಿಂದಃ-

ನನ್ನ ವಯಸ್ಸು 28 ವರ್ಷ. ದಾವಾ ಸ್ವತ್ತಿನ ಸರ್ವೇ ನಂ.96/2. ಅದರ ಒಟ್ಟು ವಿಸ್ತೀರ್ಣ 1 ಎಕರೆ 33 ಗುಂಟೆ. ಈ ಕೇಸನ್ನು 11 ಗುಂಟೆಯ ಸಂಬಂಧ ಹಾಕಿದ್ದಾರೆ. ದಾವಾ ಸ್ವತ್ತಿನ ಸರ್ವೇ ದಾಖಲೆಗಳನ್ನು ನಾನು ನೋಡಿಲ್ಲ. ಸರ್ವೇ ದಾಖಲೆಗಳು ಮೊದಲು ಯಾರ ಹೆಸರಿನಲ್ಲಿ ಇದ್ದವು ಈಗ ಯಾರ ಹೆಸನರಿಲ್ಲಿವೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಕೆಲವು ಗೊತ್ತು ಎಂದು ನುಡಿಯುತ್ತಾರೆ. ಕೆಲವು ದಾಖಲೆ ಎಂದರೆ ಪಹಣಿ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಿ ಪರ ವಕೀಲರು ಗೊತ್ತಿದ್ದರೇ ಗೊತ್ತು ಎಂದು ಹೇಳಿ, ಗೊತ್ತಿಲ್ಲದಿದ್ದರೇ ಗೊತ್ತಿಲ್ಲ ಎಂದು ಹೇಳಿ ಎಂದು ಸೂಚಿಸಿದ್ದು ಅದಕ್ಕೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. 1968 ರಲ್ಲೇ 11 ಗುಂಟೆಯನ್ನು ಮನಾರಿಗೌಡರ ಮಗ ಮಾಯಣ್ಣ ಅಲಿಯಾಸ್ ಮೋಟಪ್ಪರವರು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾಯಣ್ಣನವರ ಹೆಸರಿಗೆ ಎಂ.ಆರ್ 29/1969-70 ರಂತೆ ಖಾತೆ ಆಗಿತ್ತು ಎಂದರೆ ಇಲ್ಲ. ಕ್ರಯ ಆದಾಗಿನಿಂದ ಮಾಯಣ್ಣ ಮತ್ತು ಅಣ್ಣ ತಮ್ಮಂದಿರು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಬೇರೆ ಎಷ್ಟು ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿಯು ಪಕ್ಕದಲ್ಲಿ ಅವರ ಜಮೀನು ಇದೆ ಅದರಲ್ಲಿದ್ದರು ಎಂದು ನುಡಿಯುತ್ತಾರೆ. 11 ಗುಂಟೆ 1ನೇ ಪ್ರತಿವಾದಿಗೆ ವಿಭಾಗದಲ್ಲಿ ಬಂದಿದ್ದು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೇಯವರು ಪೋಡಿ ಮಾಡಿ, ಪೋಡಿಯಂತೆ 11

ಗುಂಟೆ ಈಶ್ವರಯ್ಯನವರ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು 11 ಗುಂಟೆ ಖಾತೆಯಾಗಿಲ್ಲ, ದಾಖಲಾತಿಗಳಲ್ಲಿ ಪ್ರಾಬ್ಲಮ್ ಇರಬಹುದು ಎಂದು ನುಡಿಯುತ್ತಾರೆ. ಏನು ಪ್ರಾಬ್ಲಮ್ ಆಗಿದೆ ಎಂದು ನಾನು ನೋಡಿಲ್ಲ. ಆ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಏನೂ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನದಲ್ಲಿ ಯಾವತ್ತೂ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯೇ ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಒತ್ತುವರಿ ಮಾಡಿದ್ದಾರೆಂದು ನಾನು ಹೇಳುವುದು ಸುಳ್ಳು, ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳು ರಾಗಿ, ಜೋಳ, ಕಾಳುಗಳನ್ನು ಬೆಳೆಯುತ್ತಿದ್ದಾರೆಂದು ನಾನು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಗಳ ಮಾತು ಕೇಳಿ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಲೋಕೇಶ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.